

ನಾವು ಪ್ರೈಮರಿ ಸ್ಕೂಲ್‌ನಲ್ಲಿ 'ಮಾನವ ಅನಾಗರಿಕನಾಗಿದ್ದಾಗ ಹಸಿಮಾಂಸ ತಿನ್ನುತ್ತಿದ್ದ' ಎಂದು ಓದುತ್ತಿದ್ದೆವು. ಆ ಎಳೆಯನ್ನಿಟ್ಟುಕೊಂಡು ನೋಡಿದರೆ, ಪ್ರಾರಂಭದಲ್ಲಿ ಎಲ್ಲರೂ ಮಾಂಸಾಹಾರಿಗಳೇ ಆಗಿದ್ದರೆಂದೆನಿಸುತ್ತದೆ. ಮನುಷ್ಯ ಕಾಳ್ಗಿಚ್ಚಿನಲ್ಲಿ ಸುಟ್ಟ ಪ್ರಾಣಿಯನ್ನು ತಿಂದು, ಬೇಯಿಸುವ ಕಲೆಯನ್ನು ಕಂಡುಹಿಡಿದ. ಭೂಲೋಕದ ಮೇಲೆ ಸ್ವರ್ಗ ಪ್ರಾಪ್ತಿಯಾಗುವ ಸನ್ನಿವೇಶವೆಂದರೆ, ಊಟದ ತಟ್ಟೆಯಲ್ಲಿ ಮಾಂಸದತುಂಡುಗಳು ಪ್ರತ್ಯಕ್ಷವಾಗುವುದೆಂದು ನನ್ನ ಇಂದ್ರಿಯಗಳೆಲ್ಲವೂ ಸರ್ವಾನುಮತದಿಂದ ಅನುಮೋದಿಸಿವೆ. ಇಂದಿಗೂ ಮಾಂಸ ತಿನ್ನದಿರುವವರ ಬಗ್ಗೆ ನನಗೆ ಕನಿಕರ ಉಂಟು. ಭಾನುವಾರ ಬಂತೆಂದರೆ, ಕಾಲುಗಳು ತಮಗರಿವಿಲ್ಲದ ಹಾಗೆ ಮಾಂಸದ ಅಂಗಡಿಯತ್ತ ರಿಲೆ ಆರಂಭಿಸುತ್ತವೆ.

ನಾನು ಅತ್ಯಂತ ಹೆಚ್ಚು ಪ್ರೀತಿಸುವುದು ನಮ್ಮ ಊರಿನ ಕಾಶಮ್ಮನ ಹಬ್ಬ, ಜಾವಗಲ್ ಕರಿಯಮ್ಮನ ಹಬ್ಬ ಮತ್ತು ಮಾರಮ್ಮನ ಬಾನ–ತೇರುಗಳು ಸಾಲುಗಟ್ಟಿಬರುವ ಏಪ್ರಿಲ್ ತಿಂಗಳನ್ನು. ಶುಕ್ರವಾರ ಕಾಶಮ್ಮನ ಹಬ್ಬಕ್ಕೆ ಕುರಿಯ ಮಾಂಸವನ್ನು ಪಾಲು ಹಾಕಿ ಹಂಚಿಕೊಂಡು ಖಾಲಿ ಮಾಡುತ್ತಿರುವಾಗಲೆ, ಮಂಗಳವಾರ ಜಾವಗಲ್ ಕರಿಯಮ್ಮನ ಹಬ್ಬ ಬಂದುಬಿಡುತ್ತದೆ. ಹಾಸನ ಜಿಲ್ಲೆಯ ಈ ಹಬ್ಬವನ್ನು ನಮ್ಮ ಜಿಲ್ಲೆಯವರೂ ಆಚರಿಸುತ್ತಾರೆ. ತಾಯಿ ಕರಿಯಮ್ಮನ ಮಹಿಮೆ ಅಂತರ್‌ಜಿಲ್ಲೆಗೂ ವ್ಯಾಪಿಸಿರುವುದಕ್ಕೆ ಒಂದು ಸಲಾಂ. ಮಂಗಳವಾರ ಕರಿಯಮ್ಮನ ಹಬ್ಬ ಮುಗಿಯುತ್ತಲೇ ಮುಂದಿನ ಮಂಗಳವಾರಕ್ಕೆ ಮಾರಿ ದಾಂಗುಡಿಯಿಡುತ್ತಾಳೆ. ಕಾರ್ಲ್‌ಮಾರ್ಕ್ಸ್‌ಗೆ ಜರ್ಮನಿಯ ಪ್ರೊಮಿಥಿಸ್ ದೇವತೆ ಇಷ್ಟವಾಗುವಂತೆ, ದೇವನೂರರನ್ನು 'ಮನೆಮಂಚಮ್ಮ' ಬರಸೆಳೆದಂತೆ ನನಗೆ ನಮ್ಮೂರಿನ ಮಾರವ್ವ ಬಲು ಸೊಗಸು. ಆಕೆಯ ಹೆಸರಿನಲ್ಲಿ ಊರೆಲ್ಲ ನಂಟರಾಗಿ, ಕೇರಿಯೆಲ್ಲ ಬಳಗವಾಗಿ, ಧಾರಿಣಿಯೆಲ್ಲ ಮಾಂಸಮಯವಾಗುವ ಪರಿ ಹಲವು ನಾಲಗೆಗಳುಳ್ಳ ಆದಿಶೇಷನಿಂದಲೂ ಬಣ್ಣಿಸಲಸದಳ.

ಮಾರಿಹಬ್ಬಕ್ಕೆಂದೇ ಅಪ್ಪ ಒಂದು ಹೋತವನ್ನು ಸಾಕಿರುತ್ತಿದ್ದ. ಅದನ್ನು ಹೋದಲ್ಲೆಲ್ಲ ಕರೆದು ಸುತ್ತಿಸಿ ತನ್ನ ಒಡನಾಡಿ ಮಾಡಿಕೊಂಡಿರುತ್ತಿದ್ದ. ಅಪ್ಪ ವಿಶಿಷ್ಟ ಧ್ವನಿಸಂಕೇತದಿಂದ ಕರೆದ ಕೂಡಲೆ ಅದು ಅವನನ್ನು ಅನುಸರಿಸುತ್ತಿತ್ತು. ಹೂವಯ್ಯನ 'ಬಲೀಂದ್ರ'ನ ಹಾಗೆ. ನಾವು ಉಣ್ಣುವ ಅನ್ನ, ಮುದ್ದೆ, ರೊಟ್ಟಿಗಳೆಲ್ಲವೂ ಅದಕ್ಕೂ ಸಲ್ಲುತ್ತಿದ್ದವು. ಹಬ್ಬ ಸಮೀಪಿಸುತ್ತಲೆ ಅದಕ್ಕೆ ಜೋಳದಕಾಳುಗಳನ್ನು ಹೆಚ್ಚು ತಿನ್ನಿಸುತ್ತಿದ್ದ. ಮಾರಿಹಬ್ಬದ